ಸದಸ್ಯರ ಹೆಸರು	ಸದಸ್ಯರ ಸೇವಾವಧಿ
ಸಮಿತಿ ಎಂ. ಮಹಾದೇವಿ	7.11.2002 ರಿಂದ
(ಮಹಿಳಾ ಸದಸ್ಯರು)	6.11.2007 ರವರೆಗೆ
ಶ್ರೀ ಜಿ.ವಿ. ಬಾಲಸುಬ್ರಹ್ಮಣ್ಯ	26.6.2003 ರಿಂದ
	25.6.2008 ರವರೆಗೆ

ಉ)1. ಗ್ರಾಹಕರ ವೇದಿಕೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಕಾಲಕಾಲಕ್ಕೆ ನೇಮಕ ಮಾಡಲಾಗುತ್ತಿದೆ.

2. ವ್ಯಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ, ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು, ನಿಯೋಜನೆಯ ಮೇಲೆ ಸಿಬ್ಬಂದಿಯ ನೇಮಕ ಹಾಗೂ ಹಣಕಾಸಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

3. ಗ್ರಾಹಕರ ವೇದಿಕೆಯಲ್ಲಿ ಹಾಗೂ ರಾಜ್ಯ ಆಯೋಗದಲ್ಲಿ ವಿಲೆ ಮಾಡಿದ ಪ್ರಕರಣಗಳ ವಿವರಗಳನ್ನು ಸಕಾರದ ಮಟ್ಟದಲ್ಲಿ ಪರಿವೀಕ್ಷಣೆ ಮಾಡುತ್ತಿದ್ದು, ಬಾಕಿ ಇರುವ ಪ್ರಕರಣಗಳ ಜರೂರು ವಿಲೆಗೆ ಕರಮ ವಹಿಸುವುದು.

ಮೈಸೂರು ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಸಂಸ್ಕರಣ ಸಂಸ್ಥೆಗಳು

4665 (5406) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು-ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೃಷಿ ಉತ್ಪನ್ನ ಸಂಸ್ಕರಣಾ ಸಂಸ್ಥೆಗಳು ಎಷ್ಟು ಯಾವುವು;

ಆ) ಈ ಸಂಸ್ಥೆಯಲ್ಲಿ ಸಿದ್ಧಪಡಿಸಲಾಗಿರುವ ಉತ್ಪನ್ನಗಳನ್ನು ಜನಪ್ರಿಯಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಕೃಷಿ ಉತ್ಪನ್ನ ಸಂಸ್ಥೆಗಳು ಲಾಭದಾಯಕವಾಗಿ ಕೆಲಸ ಮಾಡುತ್ತಿವೆಯೇ; ಇಲ್ಲವಾದರೆ ಅನುಬವಿಸಿರುವ ನಷ್ಟದ ಪ್ರಮಾಣವೆಷ್ಟು;

ಈ) ಕೃಷಿ ಉತ್ಪನ್ನಗಳನ್ನು ಲಾಭದಾಯಕವಾಗಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜಿ. ರಾಜುಗೌಡ (ಕೃಷಿ ಮತ್ತು ಸಂಸ್ಕರಣ ರಾಜ್ಯ ಸಚಿವರು)

ಅ) ರಾಜ್ಯ ಸರ್ಕಾರ ವಲಯದಲ್ಲಿ ಕರ್ನಾಟಕ ಆಗ್ರೋ ಕಾರ್ನ್ ಸಂಸ್ಥೆಯ ಒಂದು ವಿಭಾಗವು ಮೈಸೂರು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಆ) ಕರ್ನಾಟಕ ಆಗ್ರೋ ಕಾರ್ನ್ ಸಂಸ್ಥೆಯಲಲಿ ಉತ್ಪನ್ನವನ್ನೆಲ್ಲವನ್ನು ಭಾರತ ಸರ್ಕಾರದ ಯೋಜನೆಯಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಅಂಗವಾಡಿ ಮತ್ತು ಪ್ರಾಥಮಿಕ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರವಾಗಿ ನೀಡಲು ಸರಬರಾಜು ಮಾಡಲಾಗುತ್ತಿದೆ.

ಇ) ಸದರಿ ಸಂಸ್ಥೆಯು ಲಾಭದಾಯಕವಾಗಿ ನಡೆಯುತ್ತಿದೆ.

ಈ) ಉದ್ಭವಿಸುವುದಿಲ್ಲ.